


ಎಡದಿಂದ ಬಲಕ್ಕೆ:
1. ಎಂಥ ಸಂಯಮ! ಕಾಲಕ್ಕೆ ಉಚಿತವಾಗಿತ್ತು (4)
3. ಬೇವಿನ ಮರದಲ್ಲಿ 'ಹಾರುವ ಸ್ವನಿ' ನೋಡಿ (3)
4. ಜೊತೆ ಇರಬಂದವರಿಗೆಲ್ಲ ಬೆಳ್ಳಿ ಕೊಟ್ಟರೇ? (3)
6. ಗಂಭೀರವಾಗಿಯೇ ಸೊಕ್ಕು ಮುರಿಯಿತಲ್ಲ! (4)
7. ಅಲ್ಲಿ ಹಾಸಿರುವುದೊಂದೂ ಹಳೆಯದಲ್ಲವೇ ಅಲ್ಲ (3)
9. ವಿರೋಧಿಗಳೆಲ್ಲ ಧುಮುಕಿದ್ದು ಇದೇ ಕಡಲಿಗೆ (3)
11. ಈ ರಿತುವಿನ ಬೆಳೆ-ಸಾರಿಗೆ ತಕ್ಕ ಬೇಳೆ ಕಾಳು (3)
13. ಕನಸು ಆರಂಭವಾದದ್ದೇ ಮುಂಜಾವಿನಲ್ಲಿ (3)
15. ಮೊದಲಿನಿಂದಲೂ ಮರ್ಯಾದೆಯೇ ಐಶ್ವರ್ಯ (4)
17. ಮೂರ್ಖನೇನಲ್ಲ, ಆತ ಕುಲುಮೆ ಕೆಲಸದವನು (3)
18. ಅಲ್ಲಿ ಮನೆ ಮನೆಗೂ ಒಳ್ಳೇ ಹೊಳಪು (3)
19. ಹೇಗೆ ಕಾಡಿಸುತ್ತಿದೆ ನೋಡಿ ಕೊನೆಯ ಮಗು (4)

ಮೇಲಿಂದ ಕೆಳಕ್ಕೆ:
1. ಸಾಲಾಗಿ ನಿಂತವರಿಗೆಲ್ಲ ಕಡ ಕೊಡುವವ ಈತ (3)
2. ಗೊರಕೆ ಬೇಡ. ಈಗ ಇನ್ನೇನು ಬರಲಿದೆ ಕಲಶದ ಉತ್ಸವ (3)
3. ಸುಬ್ಬಣ್ಣನ ಗೆಳೆಯ ಒಳ್ಳೇ ಅಡುಗೆಯವ (3)
5. ಕಾತರಿಸಿದವರಿಗೆ ಸಿಕ್ಕ ಕಾಯಿಪಲ್ಲೆ ಇದೇ (3)
7. ಹತ್ತಿರದ ಜನರೇ ವಿನಾ... (3)
8. ಬದರೀ ಯಾತ್ರೆ ಈಗ ತುಂಬ ತುಟ್ಟಿ (3)
9. ಮನವಿ ಸಲ್ಲಿಸ ಹೋದರೆ ಪ್ರತ್ಯಕ್ಷ, ಪುರಾಣ ಪ್ರಸಿದ್ಧ ಕುಳ್ಳ! (3)
10. ಮುಖದಲ್ಲೇ ತೋರುತ್ತಿದೆ, ಭಾರೀ ಗರ್ವ (3)
12. ಮಾಣಿಕ್ಯ ಮಾರುತ್ತಿರುವ ವರ್ತಕ ಗೊತ್ತೇ? (3)
14. ಸರಾಗವಾಗಿ ಸಂಗ್ರಹಿಸಿ ತಂದದ್ದು ಬರೀ ಒಣ ಎಲೆ (3)
15. ಮೂರ್ಖರ ಸಹವಾಸ ತುಂಬ ಅಪಾಯಕರ (3)
16. ಸುಮ್ಮನಿರಬೇಡ ವಂದಿಸು (3)

## ಪದಬಂಧ: 17-03-2011ರ ಉತ್ತರಗಳು

ಎಡದಿಂದ ಬಲಕ್ಕೆ:
1. ಉಪದೇಶ; 3. ಪ್ರಮಾದ; 4. ಮಮತೆ; 6. ಪ್ರಚಾರಕ; 8. ಹಗೆತನ; 10. ನಷ್ಟ ಕಾಲ; 12. ರಸಾಯನ; 16. ನತ್ತರು; 17. ಸರಸ; 18. ಹುಸಿ ಮಾತು.

ಮೇಲಿಂದ ಕೆಳಕ್ಕೆ:
1. ಉದರ; 2. ಶಮನ, 3. ಪ್ರಹಾರ; 5 ತೆರಿಗೆ; 6. ಪ್ರಹಸನ; 7. ಕರ್ಮಫಲ; 8. ಹಸ್ತಾಂತರ; 9. ನವಮಾನ; 11. ಕಾಮನೆ; 13. ಸಾಹಸ; 14. ಅರುಹು; 15. ಹೊಸತು.

# ಭೂ ವಿಸ್ಮಯ

## 'ಜ್ವಾಲಾಮುಖಿ' - ಎಲ್ಲೆಲ್ಲಿ ಎಷ್ಟೆಷ್ಟು?

ಜ್ವಾಲಾಮುಖಿ ಅಥವಾ ಅಗ್ನಿಪರ್ವತಗಳು ಭೂ ಮೇಲ್ಮೈನ ಎಲ್ಲ ಪ್ರದೇಶಗಳಲ್ಲೂ ಇವೆ. ಎಲ್ಲ ಭೂ ಖಂಡಗಳಲ್ಲೂ, ಸಾಗರ ತಳದ ನೆಲದಲ್ಲೂ ಜ್ವಾಲಾಮುಖಿಗಳಿವೆ. ಕಡಲಿನಾವಾರದ ಹಲವಾರು ದ್ವೀಪಗಳು ಅಗ್ನಿಪರ್ವತ ಶಿಖರಗಳೇ ಆಗಿವೆ ಕೂಡ. ಹೀಗೆ ಧರೆಯ ಎಲ್ಲೆಡೆ ಅಲ್ಲಲ್ಲಿ ನೆಲೆಗೊಂಡಿರುವ ಜೀವಂತ ಜ್ವಾಲಾಮುಖಿಗಳ ಒಟ್ಟು ಸಂಖ್ಯೆ ಒಂದು ಸಾವಿರದ ಐನೂರಕ್ಕಿಂತ ಅಧಿಕ! ವಿವಿಧ ಭೂ ಖಂಡಗಳಲ್ಲಿನ ಅಗ್ನಿಪರ್ವತಗಳ ಸಂಖ್ಯಾ ವಿವರ ಇಲ್ಲಿದೆ:

ಗರಿಷ್ಠ ಸಂಖ್ಯೆಯ ಅಗ್ನಿಪರ್ವತಗಳು ಏಷಿಯಾ ಖಂಡದಲ್ಲಿವೆ. ಈ ಖಂಡದಲ್ಲಿರುವ ಜ್ವಾಲಾಮುಖಿಗಳ ಒಟ್ಟು ಸಂಖ್ಯೆ 528. ಈ ಪೈಕಿ ಇಂಡೋನೇಶಿಯಾದಲ್ಲೇ 141 ಮತ್ತು ಜಪಾನ್ ಮತ್ತದರ ಆಸುಪಾಸಿನ ದ್ವೀಪಗಳಲ್ಲಿ 113 ಜ್ವಾಲಾಮುಖಿಗಳು ದಟ್ಟೈಸಿವೆ. ಅಸಾಮಾ, ತೋಬಾ, ಉನ್ಜೆನ್, ತಾಂಬೋರಾ, ಪಿನಾಟುಬೋ... ಇವೆಲ್ಲ ಏಷಿಯಾದ ಪ್ರಸಿದ್ಧ ಜ್ವಾಲಾಮುಖಿಗಳು.

ಯೂರೋಪ್‌ನಲ್ಲಿ 41 ಜೀವಂತ ಜ್ವಾಲಾಮುಖಿಗಳಿವೆ. ಈ ಪೈಕಿ ಇಟಲಿ ಮತ್ತು ಟರ್ಕಿ ದೇಶಗಳಲ್ಲಿ ತಲಾ 13 ಅಗ್ನಿಪರ್ವತಗಳಿವೆ. ಸ್ಯಾಂಟೋರೀನೀ, ವೆಸೂವಿಯಸ್ ಮತ್ತು ಎಟ್ನಾ ಇಲ್ಲಿನವೇ.

ಆಫ್ರಿಕಾ ಮತ್ತು ಮಧ್ಯಪ್ರಾಚ್ಯ ಸೇರಿ ಇಲ್ಲಿ 161 ಅಗ್ನಿಪರ್ವತಗಳಿವೆ. ಎಥಿಯೋಪಿಯಾದಲ್ಲೇ ಅತಿ ಹೆಚ್ಚು 66 ಜ್ವಾಲಾಮುಖಿಗಳಿವೆ. ಕ್ಯಾಮರೂನ್‌ನ 'ನ್ಯಾಸ್' ತುಂಬ ಪ್ರಸಿದ್ಧ.

ಆಸ್ಟ್ರೇಲೇಶಿಯದಲ್ಲಿ 142 ಅಗ್ನಿಪರ್ವತಗಳಿವೆ (ನ್ಯೂಗಿನಿಯಲ್ಲೇ ಈ ಸಂಖ್ಯೆ 58) ಶಾಶ್ವತ ಹಿಮಲೋಕ ಅಂಟಾರ್ಕ್ಟಿಕಾದಲ್ಲೇ 23 ಅಗ್ನಿಪರ್ವತಗಳಿವೆ. ಅಲ್ಲಿನ ಎರಿಬಸ್ ತುಂಬ ಪ್ರಸಿದ್ಧ.



ಉತ್ತರ ಅಮೆರಿಕದಲ್ಲಿ 295 ಜ್ವಾಲಾಮುಖಿಗಳಿವೆ. ಸೇಂಟ್ ಹೆಲೆನ್ಸ್ ಸೇರಿದಂತೆ ಯು.ಎಸ್.ಎ.ಯಲ್ಲೇ 165 ಅಗ್ನಿಪರ್ವತಗಳಿವೆ. ಅಲಾಸ್ಕಾದಲ್ಲಿ ಗರಿಷ್ಠ ದಟ್ಟಣೆ.

ದಕ್ಷಿಣ ಅಮೆರಿಕ ಮತ್ತು ಕ್ಯಾರಿಬಿಯನ್ ಸೇರಿ 218 ಜ್ವಾಲಾಮುಖಿಗಳಿವೆ. 'ಚಿಲಿ'ಯಲ್ಲೇ 86. ರೂಯಿಜ್ ಕೋಟಪಾಕ್ಸಿ ಗ್ಯಾಲೆರಾಸ್ ಇತ್ಯಾದಿ ಅಲ್ಲಿ ಪ್ರಸಿದ್ಧ.

ಜ್ವಾಲಾಮುಖಿಗಳೇ ದ್ವೀಪಗಳಾಗಿ ನಿಂತಿರುವ ಸಂಖ್ಯೆ 106. ಹೀಗೆ ಈವರೆಗೆ ಗುರುತಿಸಲಾಗಿರುವ ಅಗ್ನಿಪರ್ವತಗಳ ಒಟ್ಟು ಸಂಖ್ಯೆ 1514!

■ ಎನ್.ವಾಸುದೇವ್